**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**
**ಕ್ರಿ.ಮಿ ನಂಃ 3347/ 2024**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀಮತಿ ಶ್ರೀದೇವಿ @ ಜಯಲಕ್ಷ್ಮೀ | ಫ್ರಾಸಾಃ **01** |
| ಗಂಡನ ಹೆಸರುಃ | ದೇವಪ್ಪ | |
| ವಯಸ್ಸುಃ | **29** ವರ್ಷ | ದಿಃ **17-10-2025** |
| ಉದ್ಯೋಗಃ | ಕೂಲಿ ಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಯಾದಗಿರಿ | |

ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಎಸ್ ಎಸ್ ಸಿ ವಕೀಲರಿಂದ:

ಎದುರುದಾರ ನನ್ನ ಗಂಡ ಆಗಿರುತ್ತಾರೆ. 2011 ರಲ್ಲಿ ನನ್ನ ಮತ್ತು ಎದುರುದಾರನ ಮದುವೆ ಚಿತ್ತಾಪೂರ ತಾಲೂಕಿನ ಕಂಚೋರ ಗ್ರಾಮದ ಹನುಮಾನ್ ದೇವಸ್ಥಾನದಲ್ಲಿ ಎರಡು ಕುಟುಂಬಗಳ ಗುರು-ಹಿರಿಯರ ಸಮಕ್ಷಮ ಆಗಿರುತ್ತದೆ. ಮದುವೆ ಸಮಯದಲ್ಲಿ ಎದುರುದಾರನಿಗೆ 05 ತೊಲೆ ಬಂಗಾರ, ರೂ.1,00,000/- ನಗದು ಹಣ ಹಾಗೂ ಬಟ್ಟೆ ಮತ್ತು ಗೃಹ ಬಳಕೆಯ ಸಾಮಾನುಗಳನ್ನು ವರದಕ್ಷಣೆ ರೂಪದಲ್ಲಿ ನೀಡಿರುತ್ತಾರೆ.

2. ನಂತರ ನಾನು ಮತ್ತು ಎದುರುದಾರ ಸುಮಾರು 05 ವರ್ಷಗಳ ವರೆಗೆ ಒಳ್ಳೆಯ ದಾಂಪತ್ಯ ಜೀವನ ನಡೆಸಿದ್ದು ನಮಗೆ 2 ಮತ್ತು 3 ನೇ ಅರ್ಜಿದಾರರು ಜನಿಸಿರುತ್ತಾರೆ. ಆ ನಂತರ ಎದುರುದಾರ ನನಗೆ ಹೊಡಿ-ಬಡಿ ಮಡಿ ಕಿರುಕುಳ ನೀಡಿರುತ್ತಾನೆ. ಗಂಡು ಮಗು ಜನಿಸಿಲ್ಲ ಎಂಬ ಕಾರಣಕ್ಕೆ ವಿವಾಹ ವಿಚ್ಛೇದನೆ ನೀಡುವಂತೆ ನನಗೆ ಕಿರುಕುಳ ನೀಡಿರುತ್ತಾನೆ.ಆ ನಂತರ ಆತ ನಮ್ಮನ್ನು ಮನೆಯಿಂದ ಹೊರ ಹಾಕಿದ ಕಾರಣ ನಾವು ನನ್ನ ತವರು ಮನೆಯಲ್ಲಿ ವಾಸವಾಗಿದ್ದೇವೆ. ಆ ನಂತರ ಎದುರುದಾರ ನಮ್ಮನ್ನು ಕರೆದುಕೊಂಡು ಹೋಗಿಲ್ಲ. ನನ್ನ ಮಕ್ಕಳ ವಿದ್ಯಾಭ್ಯಾಸವನ್ನು ನಾನೇ ನೋಡಿಕೊಳ್ಳುತಿದ್ದೇನೆ. ಅವರ ಶಾಲಾ ಶುಲ್ಕವನ್ನು ನಾನೇ ಪಾವತಿ ಮಾಡುತ್ತಿದ್ದೇನೆ. 2 ನೇ ಅರ್ಜಿದಾರು 10 ನೇ ತರಗತಿಯಲ್ಲಿ ಹಾಗೂ 3 ನೇ ಅರ್ಜಿದಾರಳು 7 ನೇ ತರಗತಿಯಲ್ಲಿ ಓದುತ್ತಿದ್ದಾರೆ.

3. ಎದುರುದಾಗ ಗಾರೆ ಕೆಲಸಗಾರನಾಗಿರುತ್ತಾನೆ. ಆತ ತಿಂಗಳಿಗೆ ರೂ.20-30 ಸಾವಿರ ಸಂಪಾದಿಸುತ್ತಾನೆ. ಆತ 04 ಎಕರೆ ಜಮೀನು ಸಹ ಹೊಂದಿದ್ದು ಅವುಗಳಿಂದ ವಾರ್ಷಿಕ ರೂ.10 ಲಕ್ಷ ಆದಾಯ ಹೊಂದಿರುತ್ತಾನೆ. ನನ್ನ ಮಕ್ಕಳ ಎಲ್ಲಾ ಖರ್ಚನ್ನು ನಾನೇ ನೋಡಿಕೊಳ್ಳುತ್ತಿದ್ದೇನೆ. ಸದರಿ ಆದಾಯದಲ್ಲಿ ಎದುರುದಾರ ನಮಗೆ ಯಾವುದೇ ಜೀವನಾಂಶ ಪಾವತಿ ಮಾಡುತ್ತಿಲ್ಲ. ಆದ್ದರಿಂದ ಅರ್ಜಿಯಲ್ಲಿ ಕೇಳಿದ ರೀತಿ ಪರಿಹಾರ ನೀಡುವಂತೆ ಕೋರಿಕೊಳ್ಳುತ್ತೇನೆ.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ